OS No.414/2015
**PW-1**

## Further Cross examination by Sri. SBV Counsel for the Defendant No.1 to 4.

Witness Duly Sworn on : 22-08-2019

1) 1 ರಿಂದ 4 ನೇ ಪ್ರತಿವಾದಿಯರ 1 ರಿಂದ 4 ನೇ ಮನೆಯ ಮುಂದೆ ನಾಗಪ್ಪ ಪಿಳ್ಳೆಪ್ಪ ಜಯವಾಡಗಿಯವರ ಮನೆ ಇದೆ ಎಂದರೆ ಸರಿ. ಜಯವಾಡಿಯವರ ಮನೆಯ ಪಕ್ಕದಲ್ಲಿ ಮಲ್ಲಣ್ಣ ಪಡೇಕನೂರವರ ಮನೆ ಇದೆ ಎಂದರೆ ಸರಿ. ಸದರಿ ಎರಡು ಜನರ ಮನೆಯನ್ನು ದಾಟಿದ ನಂತರ ಊರಿನ ಹದ್ದು ಮತ್ತು ಜಮೀನುಗಳು ಬರುತ್ತವೆ ಎಂದರೆ ಸರಿ. ಪ್ರತಿವಾದಿಯರ ಮನೆಯನ್ನು ಬಿಟ್ಟು ಒಂದು ಮನೆ ದಾಟಿದ ನಂತರ ಊರಿನ ಹದ್ದು ಮತ್ತು ಜಮೀನುಗಳು ಬರುತ್ತವೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಉತ್ತರಕ್ಕೆ ಗುರನಗೌಡ ಬಿರಾದಾರ ಮತ್ತು ಮಲ್ಲೇಶಪ್ಪ ಪಾಟೀಲರವರ ಮನೆ ಬರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಭೀಮನಗೌಡ ಚಂದಪ್ಪ ಬಿರಾದಾರ ಹಾಗೂ ಸಿದ್ದನಗೌಡ ಪಡೆಕನೂರವರ ಮನೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಮುಂದೆ ರಾಜೇಸಾಬ್‌ರವರ ಮನೆ ಬರುತ್ತದೆ. ನಾನು ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

2. ಪ್ರತಿವಾದಿ ಮನೆ ಕಟ್ಟಿದಾಗಿನಿಂದಲೂ ಯಾವುದೇ ತಂಟೆ ತಕರಾರು ಆಗಿಲ್ಲ ಎಂದರೆ ಸರಿ. ನಾನು ವಾದಪತ್ರದಲ್ಲಿ ತೋರಿಸಿದ ಹಾತನಕಾಶೆಯಂತೆ ದಾವಾ ರಸ್ತೆಯಲ್ಲಿ ಯಾವುದೇ ಚರಂಡಿ ಅಥವಾ ಒಳಚರಂಡಿ ಇಲ್ಲ ಎಂದರೆ ಸರಿ. ನಾನು ನನ್ನ ವಾದಪತ್ರದ 5 ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆಯ ಮುಂದೆ ಅಸ್ತಿತ್ವದಲ್ಲಿರುವ ರಸ್ತೆಯಲ್ಲಿ ಮೃತ ವ್ಯಕ್ತಿಗಳ ಶವವನ್ನು ತೆಗೆದುಕೊಂಡು ಹೋಗಲು ಮತ್ತು ಸದರಿ ರಸ್ತೆಯನ್ನು ಉಪಭೋಗಮಾಡಲು ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮುಂದೆ ಅಸ್ತಿತ್ವವಿರುವ ರಸ್ತೆಯಷ್ಟೆ ಅಕ್ಕಪಕ್ಕದ ಮನೆಯವರ ಮುಂದೆ ರಸ್ತೆ ಇದೆ ಎಂದರೆ ಸರಿ.

3. ನನ್ನ ವಾದ ಪತ್ರದ ಶೀರೊನಾಮೆಯಲ್ಲಿ 1 ರಿಂದ 4 ನೇ ಪ್ರತಿವಾದಿಯರ ಉದ್ಯೋಗ ಒಕ್ಕಲುತನ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿ. ಸದರಿಯವರು ಕೂಲಿ ಕಾರ್ಮಿಕರು ಎಂದರೆ ಸರಿಯಲ್ಲ. ದಾವೆಯಲ್ಲಿ ಹೂಡುವ ಪೂರ್ವದಲ್ಲಿಯೇ ಪ್ರತಿವಾದಿಯರು ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಯಾವ ವರ್ಷದಲ್ಲಿ ಮಾಡಿದ್ದೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯರು ದಿನಾಂಕ 01-04-2015 ರಂದು ನಿಗದಿತ ಶುಲ್ಕ ಪಾವತಿ ಮಾಡಿ ಪಂಚಾಯತನಿಂದ ಕಟ್ಟಡ ಪರವಾನಗಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಪರವಾನಗಿಯನ್ನು ಪಡೆದು ಊರಿನಲ್ಲಿ ಎಲ್ಲರಿಗೂ ಗೊತ್ತಿರುವಂತೆ ಯಾವುದೇ ತಕರಾರು ಇಲ್ಲದೇ ಪ್ರತಿವಾದಿಯರ ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತನ್ನ ಮನೆಯ ಕಾಂಪೌಡನ್ನು ದಾವಾ ರಸ್ತೆಯಿಂದ 7-8 ಅಡಿ ಜಾಗ ಬಿಟ್ಟು ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ.

3. ಪ್ರತಿವಾದಿಯರ ಮನೆಯ ಪೂರ್ವ ಮತ್ತು ದಕ್ಷಿಣ ಮಧ್ಯದದಲ್ಲಿ ಭಾರತ್ ಸಂಚಾರ ನಿಗಮರವರು ಗೋಪುರವನ್ನು ಕಟ್ಟಿದ್ದಾರೆ ಎಂದರೆ ಸರಿ. ಸದರಿ ಗೋಪುರ ಸುಮಾರು 25 ವರ್ಷಗಳಿಂದ ಪ್ರತಿವಾದಿಯರ ಮನೆಗೆ ಹೊಂದಿಕೊಂಡು ಅಸ್ತಿತ್ವದಲ್ಲಿದೆ ಎಂದರೆ ಸರಿ. ಪ್ರತಿವಾದಿಯರ ಮನೆಗೆ ಮತ್ತು ಅಕ್ಕಪಕ್ಕದವರಿಗೆ ಇವರೆಗೂ ಕುಡಿಯುವ ನೀರಿನ ಕೊಳವೆ ವ್ಯವಸ್ಥೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಜಾಗವನ್ನು ಪರಿಶೀಲನೆ ಮಾಡಿದ ನಂತರ ಪಂಚಾಯತನವರು ಪರವಾನಗಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆ ಕಟ್ಟಡಕ್ಕೆ ಊರಿನಲ್ಲಿ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿಯಲ್ಲ.

4. ವಡವಡಗಿ ಗ್ರಾಮ ಪಂಚಾಯತನ ಹಿಂದಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಹಾಗೂ ಹಾಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಬಸವರಾಜ ಡೆಂಗಿ, ನಾನು ಎಲ್ಲರೂ ಒಂದೇ ಪಕ್ಷದವರು ಎಂದರೆ ಸರಿ. ಊರಿನಲ್ಲಿ ನಮ್ಮ ಮಾತು ಅಂತಿಮವಾಗಿತ್ತು ಎಂದರೆ

ಸರಿಯಲ್ಲ. ಪ್ರತಿವಾದಿಯರಿಗೆ ರಾಜಕೀಯವಾಗಿ ಒತ್ತಡ ತಂದಿದ್ದೇವು ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಒತ್ತಡಕ್ಕೆ ಮಣಿಯದೇ ಇದ್ದಾಗ ಈ ರೀತಿಯಾಗಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಗೆ ಬೇಕಾದ ಪಂಚಾಯತ ಅಧಿಕಾರಿಗಳೊಂದಿಗೆ ಶಾಮೀಲಾಗಿದ್ದೇನೆ ಎಂದರೆ ಸರಿಯಲ್ಲ. ನಾಗರಾಳ ಗ್ರಾಮದಲ್ಲಿ ಸುಮಾರು 1,500 ಜನ ಸಂಖ್ಯೆ ಇರಬಹುದು ಎಂದರೆ ಸರಿ. ಸದರಿ ಗ್ರಾಮದ ನಾಕಶೆ ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ.ನನ್ನ ವಾದಪತ್ರಕ್ಕೆ 3 ರಿಂದ 5 ನೇ ವಾದಿಯ ಸಹಿಯನ್ನು ಮಾಡಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಬಸವನ ಬಾಗೇವಾಡಿ.